<u>ದಿನಾಂಕಃ 25.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಸಿ.ಎಲ್.ಡಿ. ವಕೀಲರಿಂದ ಃ</u>

ನಾನು ನನ್ನ ಪ್ರಮಾಣ ಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪೂರ್ವಕ ಹೇಳಿಕೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನ್ನ ಮಾಹಿತಿ ಪ್ರಕಾರ ಸತ್ಯ ಮತ್ತು ಸರಿಯಾಗಿರುತ್ತವೆ. ಪ್ರಮಾಣ ಪೂರ್ವಕ ಹೇಳಿಕೆ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**<u>ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ.ಜಿ.ಪಿ. ವಕೀಲರಿಂದ ಃ</u>**

1. ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ಸಾಕ್ಷ್ಯ ನುಡಿಯಲು ನನಗೆ ನಮ್ಮ ಸಂಸ್ಥೆಯ ಅಧಕ್ಷರು ಮತ್ತು ನಮ್ಮ ವಕೀಲರು ಹೇಳಿರುತ್ತಾರೆ. ಸಧ್ಯ ಈಗ ನಮ್ಮ ಸಂಸ್ಥಗೆ ಒಬ್ಬರೇ ಅಧ್ಯಕ್ಷರು ಇರುತ್ತಾರೆ. ಈ ಹಿಂದೆ ನಮ್ಮ ಸಂಸ್ಥೆಗೆ 3 ಜನ ಅಧ್ಯಕ್ಷರು ಇದ್ದರು. ಸಧ್ಯ ಅಧ್ಯಕ್ಷರು ಇರುವ ಭುವನೇಶ್ವರಿ ಇವರು ನನಗೆ ಸಾಕ್ಷ್ಯ ನುಡಿಯಲು ಹೇಳಿರುತ್ತಾರೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ.

2. ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ ದಿನದಂದೇ ಎಲ್ಲ ತಿಳಿದುಕೊಂಡು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. 2006 ಕ್ಕಿಂತ ಮುಂಚೆ ನಾನು ನಿರುದ್ಯೋಗಿ ಆಗಿದ್ದೇನು. 2006 ರಲ್ಲಿ ನಾನು ನಿಡಗುಂದಿಯಲ್ಲಿ ಪದವಿ ಓದುತ್ತಿದ್ದೇನು. 2006 ರಿಂದ ಮಾತ್ರ ನನಗೆ ಪ್ರತಿವಾದಿಯ ಸಂಸ್ಥೆಯ ಬಗ್ಗೆ ಗೊತ್ತು ಎಂದರೆ - ಸಾಕ್ಷಿಯು ಅದಕ್ಕಿಂತ ಮುಂಚೆಯೂ ನನಗೆ ಪ್ರತಿವಾದಿಯ ಸಂಸ್ಥೆಯ ಬಗ್ಗೆ ಗೊತ್ತು ಎಂದು ನುಡಿಯುತ್ತಾರೆ.

3. 2006 ಕ್ಕಿಂತ ಮುಂಚೆ ಪ್ರತಿವಾದಿ ಸಂಸ್ಥೆಯಲ್ಲಿ ನನ್ನ ಸ್ನೇಹಿತರು ಮತ್ತು ನನ್ನ ಸಂಬಂಧಿಕರು ಇದ್ದ ಕಾರಣ ಅವರನ್ನು ಭೇಟಿ ಮಾಡಲು ಹೋಗಿ ಬಂದು ಮಾಡುತ್ತಿದ್ದೇನು. ವಾದಿ ದಾವೆಯನ್ನು ನಮ್ಮ ಸಂಸ್ಥೆಯ ಅಧ್ಯಕ್ಷರು ಮತ್ತು ನಮ್ಮ ಶಾಲೆಯ ಮುಖ್ಯ ಗುರುಗಳ ಮೇಲೆ ಮಾತ್ರ ದಾಖಲಿಸಿರುತ್ತಾರೆ. ದಾವೆಯಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರು ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ನಂ.1 ಮತ್ತು 2 ರವರು ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳು ನನ್ನ ಪ್ರಮಾಣ ಪತ್ರದ ಭಾಗ ಇರುತ್ತವೆ ಎಂದು ನನ್ನ ಪ್ರಮಾಣ ಪತ್ರದ 3 ನೇ ಪುಟದ 4 ನೇ ಖಂಡಿಕೆಯಲ್ಲಿ ನಾನೇ ನಮೂದು ಮಾಡಿಸಿರುತ್ತೇನೆ.

4. ದಾವಾ ಆಸ್ತಿಯು ವಾದಿಯ ತಂದೆಗೆ ಗೇಣಿ ನಾತೆಯಿಂದ ಬಂದಿರುತ್ತದೆ ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1994 ರಿಂದ ಇಲ್ಲಿಯವರೆಗಿನ ಪಹಣಿ ಪತ್ರಿಕೆಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರು ಉಲ್ಲೇಖ ಇದೆ ಎಂದರೆ - ಸಾಕ್ಷಿಯು ತಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 31.03.1981 ರಂದು ದಾವಾ ಆಸ್ತಿಯನ್ನು ಭೂನ್ಯಾಯ ಮಂಡಳಿಯವರು ವಾದಿಯ ತಂದೆಗೆ ಮಂಜೂರು ಮಾಡಿರುತ್ತಾರೆ ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮಂಜೂರಾದಾಗ ಸದರಿ ಆಸ್ತಿಯನ್ನು 15 ವರ್ಷಗಳ ಕಾಲ ಪರಭಾರೆ ಮಾಡಬಾರದು ಎಂಬ ಷರತ್ತಿಗೆ ಒಳಪಟ್ಟು ಸದರಿ ಆಸ್ತಿಯನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ನಿಡಿ-29 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯ ಸದರಿ ದಾಖಲೆಯಲ್ಲಿ ಶಾಲೆ ಮತ್ತು ಮೈದಾನ ಇರುವುದಾಗಿ ನುಡಿಯುತ್ತಾರೆ. ಸದರಿ ಛಾಯಾಚಿತ್ರದಲ್ಲಿ ಮೈದಾನ ಇರದೇ ಜಮೀನು ಇರುತ್ತದೆ ಎಂದರೆ - ಸಾಕ್ಷಿಯು ಮೈದಾನವನ್ನು ಹಾಳು ಮಾಡಲು ಗಳೆ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಛಾಯಾ ಚಿತ್ರದಲ್ಲಿ ಬೇಲಿ ಹಾಕಲಾಗಿರುತ್ತದೆ ಎಂದರೆ - ಸಾಕ್ಷಿಯು ಮೈದಾನವನ್ನು ಹಾಳು ಮಾಡಬಾರದು ಎಂದು ಬೇಲಿ ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ.

6. ಸಾಕ್ಷಿಗೆ ನಿಪಿ-32 ರಿಂದ ನಿಪಿ-39 ರವರೆಗಿನ ಛಾಯಾಚಿತ್ರಗಳನ್ನು ತೋರಿಸಲಾಗಿ ಸದರಿ ಛಾಯಾಚಿತ್ರಗಳಲ್ಲಿ ಸಾಕ್ಷಿಯು ತೋಗರೆ ಬೆಳೆ ಇದ್ದದ್ದನ್ನು ಹಾಗೂ ಜಮೀನು ಉಳುಮೆ ಮಾಡಿದ್ದನ್ನು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ-40 ರಲ್ಲಿ ವಾದಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯು ಮುಂದುವರೆದು ವಾದಿಯೇ ಶಾಲೆಯ ಮೈದಾನವನ್ನು ಹಾಳು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-39 ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯ ಪ್ರಕಾರ ಜಮೀನನ್ನು ಗಳೆ ಹೊಡೆದಿರುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ಈ ಮೇಲೆ ಹೇಳಿದ ಛಾಯಾಚಿತ್ರವನ್ನು ತೋರಿಸಲಾಗಿ ಸದರಿ ಛಾಯಾಚಿತ್ರದಲ್ಲಿ ಟ್ರ್ಯಾಕ್ಟರ್ ಮತ್ತು ಜನರು ಇರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

7. ನಿಂಗಪ್ಪ ರೂಗಿ ಇವರು ನನಗೆ ಗೊತ್ತು. ಸದರಿರವರು ನರಗುಂದ ಗ್ರಾಮದ ಸೊಟಕನಾಳದಲ್ಲಿ ಮತ್ತು ದಾವಾ ಆಸ್ತಿ ಇರುವ ಬೀಲ್ ಕೆರೂರು ಗ್ರಾಮದಲ್ಲಿ ಇರುತ್ತಿದ್ದರು ಎಂದರೆ ಸರಿ. ಈಗ ಅವರು ತೀರಿಕೊಂಡಿರುತ್ತಾರೆ. ಸದರಿರವರು ನಮ್ಮ ಶಾಲೆ ಮತ್ತು ಸಂಸ್ಥೆಯ ಅಧ್ಯಕ್ಷರ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. ನಿಡಿ-43 ದಾಖಲೆಯನ್ನು ಯಾರು ಮತ್ತು ಯಾವಾಗ ಹಾಜರ ಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು 2011 ರಲ್ಲಿ 2 ನೇ ಪ್ರತಿವಾದಿ ಹಾಜರ ಪಡಿಸಿರುತ್ತಾರೆ ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಬರೆಯುವ ಮುಂಚೆ ಆದ ಮಾತುಕತೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು ಬರೆಯಲು ಬೇಕಾಗುವ ಸ್ಟಾಂಪ್ ಕಾಗದವನ್ನು ಯಾರು ತಂದರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು ಕೈಯಿಂದ ಬರೆದಿರುತ್ತಾರೋ ಅಥವಾ ಬೆರಳಚ್ಚು ಮಾಡಿರುತ್ತಾರೋ ಎಂದರೆ - ಸಾಕ್ಷಿಯು ತಾನು ನೋಡಿದಾಗ ಬೆರಳಚ್ಚು ಮಾಡಿದ್ದಾಗಿ ನುಡಿಯುತ್ತಾರೆ. ನಿಡಿ-43 ದಾಖಲೆಯನ್ನು ನಾನು ಸ್ವಲ್ಪ ಮಟ್ಟಿಗೆ ಓದಿರುತ್ತೇನೆ. ಸದರಿ ದಾಖಲೆಯಲ್ಲಿ ನಮೂದು ಇರುವ ಷರತ್ತುಗಳು ನನಗೆ ಗೊತ್ತಿರುವುದಿಲ್ಲ.

9. ಸಾಮಾನ್ಯವಾಗಿ ಅನುಕೂಲಸ್ಥರು ಮಾತ್ರ ತಮಗೆ ಬೇಕಾದವರಿಗೆ ದಾನ ಕೊಡುತ್ತಾರೆ ಎಂದರೆ - ಸಾಕ್ಷಿಯು ಸದರಿ ವಿಚಾರವಾದ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ಬಡತನ ಕುಟುಂಬಕ್ಕೆ ಸೇರಿದವಳು ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

10. ಶಾಲೆ ಪ್ರಾರಂಭಿಸಲು ಅನುಮತಿ ಪಡೆಯುವ ಕಾಲಕ್ಕೆ ನಿಡಿ-43 ದಾಖಲೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವೆಯ ಚಾಲ್ತಿಯಲ್ಲಿರುವ ವಿಚಾರವನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಿರುತ್ತಿರಾ ಎಂದರೆ - ಸಾಕ್ಷಿಯು ತಾನು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ.

11. ಸಾಕ್ಷಿಗೆ ನಿಡಿ-7 ಛಾಯಾಚಿತ್ರವನ್ನು ತೋರಿಸಲಾಗಿ ಸದರಿ ಛಾಯಾಚಿತ್ರದಲ್ಲಿ ಧ್ವಜಸ್ತಂಭ ಮತ್ತು ವಾಲಿಬಾಲ್ ಮೈದಾನ ಇರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಒಂದು ಹಳೇಯ ಶಾಲೆ ಮತ್ತು ಒಂದು ಹೊಸ ಶಾಲೆ ಇವೆ ಎಂದರೆ ಸರಿ. ಸದರಿ ಛಾಯಾಚಿತ್ರದಲ್ಲಿ ಇರುವ ಶಾಲೆ ಹಳೇಯ ಶಾಲೆ ಎಂದರೆ ಸರಿ. 2 ವರ್ಷಗಳ ಹಿಂದೆ ಹಳೇಯ ಶಾಲೆಯ ಎರಡು ಗೋಡೆಗಳು ಬಿದ್ದಿದ್ದವು ಎಂದರೆ - ಸಾಕ್ಷಿಯು ಒಂದು ಗೋಡೆ ಮಾತ್ರ ಬಿದ್ದಿತ್ತು ಎಂದು ನುಡಿಯತ್ತಾರೆ. ಸದರಿ ಗೋಡೆಯನ್ನು ಇಲ್ಲಿವರೆಗೆ ಕಟ್ಟಿಸಿರುವುದಿಲ್ಲ. ಸದರಿ ಗೋಡೆಯನ್ನು ದುರಸ್ಥಿ ಮಾಡಿಕೊಳ್ಳಲು ನಮಗೆ ತೊಂದರೆ ಇರಲಿಲ್ಲ ಎಂದರೆ - ಸಾಕ್ಷಿಯು ನ್ಯಾಯಾಲಯದ ಆದೇಶ ಇದ್ದ ಕಾರಣ ದುರಸ್ಥಿ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

12. ಇತ್ತಿಚೆಗೆ 6 ಹೊಸ ಕೋಣೆಗಳನ್ನು ಕಟ್ಟಿರುತ್ತೇವೆ ಎಂದರೆ - ಸಾಕ್ಷಿಯು ಬೇರೆ ಸರ್ವೆ ನಂಬರಿನಲ್ಲಿ ಕೋಣೆಗಳನ್ನು ಕಟ್ಟಿರುವುದಾಗಿ ನುಡಿಯುತ್ತಾರೆ. ಪಂಚಾಯತಿಯಿಂದ ಪರವಾಣಿಗೆ ಪಡೆದು ಸದರಿ ಕೋಣೆಗಳನ್ನು ಕಟ್ಟಿದ ಕಾರಣ ಸದರಿ ವಿಚಾರವನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸುವ ಅವಶ್ಯಕತೆ ಇರುವುದಿಲ್ಲ. ಸದರಿ ಕೋಣೆಗಳನ್ನು ಕಟ್ಟಿ ಒಂದು ವರ್ಷ ಆಗಿರುತ್ತದೆ. ದಾವಾ ಆಸ್ತಿ ಮತ್ತು ಹೊಸದಾಗಿ ಕಟ್ಟಿದ ಕೋಣೆಗಳು ಇರುವ ಹೊಲದ ನಡುವೆ ಬದುವು ಇರುವುದಿಲ್ಲ. ಸದರಿ ಆಸ್ತಿಗಳ ನಡುವೆ ಬದುವು ಇತ್ತು ಎಂದರೆ ಸರಿಅಲ್ಲ. ಬದುವುಗಳನ್ನು ನಾಶಪಡಿಸಿ ಹೊಸ ಕೋಣೆಗಳನ್ನು ಕಟ್ಟಿಕೊಂಡಿರುತ್ತೇವೆ ಎಂದರೆ ಸರಿಅಲ್ಲ. ಹೊಸದಾಗಿ ಕಟ್ಟಿದ ಕೋಣೆಗಳಿಗೆ ದಾವಾ ಆಸ್ತಿಯ ಮುಖಾಂತರವೇ ಹೋಗಬೇಕು ಎಂದರೆ - ಸಾಕ್ಷಿಯು ಸದರಿ ಕೋಣೆಗಳಿಗೆ ಹೋಗಲು ಎರಡು ದಾರಿಗಳು ಇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮುಖಾಂತರ ಮಾತ್ರ ಸದರಿ ಹೊಸ ಕೋಣೆಗಳಿಗೆ ಹೋಗಬೇಕಾಗುತ್ತದೆ ಎಂದರೆ ಸರಿಅಲ್ಲ. ಸದರಿ ವಿಚಾರವಾಗಿ ಗ್ರಾಮ ಪಂಚಾಯತಿಯವರು ನಮಗೆ ನೋಟಿಸು ನೀಡಿರುತ್ತಾರೆ ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾರಿ ಇಲ್ಲದ ಬಗ್ಗೆ ತಹಶೀಲ್ದಾರ ಕಚೇರಿಯವರು ವರದಿ ನೀಡಿರುತ್ತಾರೆ ಎಂದರೆ - ಸಾಕ್ಷಿಯು ನೀಡಿರಬಹುದು ಎಂದು ನುಡಿಯುತ್ತಾರೆ.

13. ಹಳೇ ಶಾಲೆ ಮತ್ತು ಹೊಸ ಶಾಲೆ ಕಟ್ಟಿದ ಜಮೀನುಗಳು ಭೂಪರಿವರ್ತನೆ ಆಗಿರುತ್ತವೆ ಎಂದರೆ - ಸಾಕ್ಷಿಯು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಹೊಸ ಶಾಲೆ ಕಟ್ಟಬೇಕಾದರೆ ಎಂ.ಎನ್.ಬಾಲದಂಡೆನವರ ಇವರು ಶಾಲೆಯ ಮುಖ್ಯ ಗುರುಗಳಾಗಿದ್ದರು. ಸದರಿರವರು ಕೇಸನೂರು ಗ್ರಾಮದವರು.

14. ನಿಡಿ-43 ದಾಖಲೆಯನ್ನು ನಮ್ಮ ಸಂಸ್ಥೆಯವರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಅಲ್ಲ. ನಿಡಿ-44 ದಾಖಲೆಯಲ್ಲಿ ಇರುವ ಹೆಬ್ಬಟ್ಟಿನ ಗುರುತು ವಾದಿಯ ಹೆಬ್ಬಟ್ಟಿನ ಗುರುತು ಅಲ್ಲ ಎಂದರೆ ಸರಿಅಲ್ಲ. ದಾವೆಯಲ್ಲಿ ಅನುಕೂಲವಾಗಲು ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿ ದಾಖಲು ಮಾಡಿರುತ್ತೇವೆ ಎಂದರೆ ಸರಿಅಲ್ಲ. ಸಾಕ್ಷಿಯು ಮುಂದುವರೆದು ತಮ್ಮ ಸಂಸ್ಥೆಯಲ್ಲಿ ಅಡಿಗೆ ಸಹಾಯಕಿ ಅಂತಾ ಕೆಲಸ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಕೆಲಸಕ್ಕೆ ತಾಲೂಕಾ ಪಂಚಾಯತಿಯವರು ವಾದಿಯ ಖಾತೆಗೆ ಹಣ ಜಮೆ ಮಾಡಿರುತ್ತಾರೆ.

15. ವಾದಿಯ ತಂದೆ ಯಾವ ರೀತಿ ಸಹಿ ಹಾಕುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ-43 ದಾಖಲೆಗೆ ವಾದಿಯ ತಂದೆ ಮತ್ತು ವಾದಿ ಸಹಿ ಹಾಕಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ನಾನೇ ಹೇಳಿ ಬರೆಸಿರುತ್ತೇನೆ. ಕೋರ್ಟ ಫೀ ವಿಚಾರವಾಗಿ ಈಗಾಗಲೇ ನ್ಯಾಯಾಲಯದ ಆದೇಶ ಆಗಿದ್ದರೂ ಸಹ ಮತ್ತೆ ಸದರಿ ವಿಚಾರವಾಗಿ ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ನಮೂದು ಮಾಡಿರುತ್ತೇನೆ ಎಂದರೆ ಸರಿಅಲ್ಲ.

16. ನಿಡಿ-46 ದಾಖಲೆಯಲ್ಲಿ ವಾದಿಯ ಹೆಸರು ಮಾತ್ರ ನಮೂದು ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ವಾದಿಯ ಜೊತೆ ಇನ್ನಿಬ್ಬರ ಹೆಸರು ನಮೂದು ಇದೆ. ವಾದಿಗೆ ಒಂದು ಗಂಡು ಮಗ ಮತ್ತು ಒಂದು ಹೆಣ್ಣು ಮಗಳ ಎಂದರೆ ಸರಿ. ವಾದಿಯ ಮಗ ಬಿ.ಎಸ್.ಸಿ. ಪಧವಿಧರ ಎಂದರೆ - ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ವಾದಿಗೆ ದಾವಾ ಆಸ್ತಿ ಮತ್ತು ನಿಡಿ-46 ದಾಖಲೆಯಲ್ಲಿ ನಮೂದು ಮಾಡಿದ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ - ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ವಾದಿಗೆ 4 ಕೋಣೆಗಳ ಒಂದು ಹಳೇಯ ಮನೆ ಇದೆ ಎಂದರೆ - ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

17. 1994 ರಿಂದ ವಾದಿಯು ದಾವಾ ಆಸ್ತಿಯ ಸ್ವಾಧೀನವನ್ನು ನೀಡುವಂತೆ ನಮ್ಮ ಜೊತೆ ತಕರಾರು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಅಲ್ಲ. ದಾವಾ ಆಸ್ತಿಯು ಖಾಸಗಿ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯು ಸಾರ್ವಜನಿಕ ಸ್ಥಳ ಅಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ-45 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ಛಾಯಾಚಿತ್ರ ಈ ಮೇಲೆ ಹೇಳಿದ ಬಿದ್ದ ಗೋಡೆಯ ಛಾಯಾ ಚಿತ್ರ ಎಂದು ನುಡಿಯುತ್ತಾರೆ.

18. ಸಾಕ್ಷಿಗೆ ನಿಪಿ-50 ಛಾಯಾಚಿತ್ರವನ್ನು ತೋರಿಸಲಾಗಿ, ಹಳೇಯ ಶಾಲೆಯ ಹಿಂದಿನ ಸುಮಾರು 20 ಮೀಟರ್ ಜಮೀನು ಹಾಳುಬಿದ್ದಿರುವುದಾಗಿ ನುಡಿಯುತ್ತಾರೆ. ಸದರಿ ಜಮೀನನ್ನು ಉದ್ದೇಶಪೂರ್ವಕವಾಗಿ ಹಾಳು ಕೆಡವಿರುತ್ತೇವೆ ಎಂದರೆ ಸರಿಅಲ್ಲ.

19. ನಾವು ಗೋಡೆಯನ್ನು ದುರಸ್ಥಿ ಮಾಡದ ಕಾರಣ ಶಿಕ್ಷಣ ಇಲಾಖೆಯವರು ಹಳೇಯ ಶಾಲೆಯನ್ನು ಬಂದ್ ಮಾಡುವಂತೆ ಆದೇಶ ಮಾಡಿದ್ದರು ಎಂದರೆ - ಸಾಕ್ಷಿಯು ಸದರಿ ಆದೇಶವನ್ನು ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿ ಸದರಿ ಆದೇಶವನ್ನು ರದ್ದು ಪಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ವಿಚಾರವಾಗಿ ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ, ಸದರಿ ದಾಖಲೆಗಳನ್ನು ನಿಪಿ-52 ಮತ್ತು ನಿಪಿ-53 ಎಂದು ಗುರುತಿಸಲಾಯಿತು.

20. ನಮ್ಮ ಶಾಲೆಯಲ್ಲಿ ಯಾವುದೇ ಖಾಯಂ ಶಿಕ್ಷಕರು ಇರುವುದಿಲ್ಲ ಎಂದರೆ - ಸಾಕ್ಷಿಯು ಈ ಮುಂಚೆ ಇದ್ದರು ಆದರೆ ನಿಪಿ-52 ಮತ್ತು ನಿಪಿ-53 ಆದೇಶ ಆದ ನಂತರ ಸದರಿ ಶಿಕ್ಷಕರನ್ನು ಬೇರೆ ಕಡೆ ವರ್ಗಾವಣೆ ಮಾಡಿರುವುದಾಗಿ ನುಡಿಯುತ್ತಾರೆ. ಸಧ್ಯ ಈಗ ನಮ್ಮ ಶಾಲೆಯಲ್ಲಿ ನಾನೊಬ್ಬನೇ ಖಾಯಂ ಶಿಕ್ಷಕ.

21. ದಾವೆ ಚಾಲ್ತಿಯಲ್ಲಿರುವಾಗ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಅಲ್ಲ. ಶಾಲೆಯನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಅಲ್ಲ. ನಮ್ಮ ಅತೀಕ್ರಮಣದ ಬಗ್ಗೆ ವಾದಿ ಮತ್ತು

ಅವರು ಕುಟುಂಬದವರು ಸಂಬಂಧಪಟ್ಟ ಇಲಾಖೆಗೆ ಮತ್ತು ಅಧಿಕಾರಗಳ ಗಮನಕ್ಕೆ ತಂದಿರುತ್ತಾರೆ ಎಂದರೆ ಸರಿಅಲ್ಲ. ನಾನು ಶಾಲೆಯ ಮುಖ್ಯ ಗುರುಗಳಾದ ಕಾರಣ ನಮ್ಮ ಸಂಸ್ಥೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಅಲ್ಲ. ದಾವೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಅಲ್ಲ. ನಾವು ಅನುಮತಿಯನ್ನುಪಡೆಯದೇ ಹೊಸ ಮತ್ತು ಹಳೇ ಶಾಲೆಗಳನ್ನು ಕಟ್ಟಿರುತ್ತೇವೆ ಎಂದರೆ ಸರಿಅಲ್ಲ. ಸದರಿ ವಿಚಾರವಾಗಿ ಸಂಬಂಧಪಟ್ಟವರು ನಿಪಿ-25 ರಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಅಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ .

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ನ್ಯಾಯಾಲಯ ಬಾಗಲಕೋಟೆ

<u>ದಿನಾಂಕಃ 25.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಸಿ.ಎಲ್.ಡಿ. ವಕೀಲರಿಂದ ಃ</u>

ನಾನು ನನ್ನ ಪ್ರಮಾಣ ಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪೂರ್ವಕ ಹೇಳಿಕೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನ್ನ ಮಾಹಿತಿ ಪ್ರಕಾರ ಸತ್ಯ ಮತ್ತು ಸರಿಯಾಗಿರುತ್ತವೆ. ಪ್ರಮಾಣ ಪೂರ್ವಕ ಹೇಳಿಕೆ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**<u>ಪಾಟೀಸವಾಲುಃ ವಾದಿ ಪರ ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಲಾಯಿತು.</u>**

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ .

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ನ್ಯಾಯಾಲಯ ಬಾಗಲಕೋಟೆ

<u>ದಿನಾಂಕಃ 25.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>.
<u>ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ ಸಿ.ಎಲ್.ಡಿ. ವಕೀಲರಿಂದ :</u>

ನಾನು ನನ್ನ ಪ್ರಮಾಣ ಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪೂರ್ವಕ ಹೇಳಿಕೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನ್ನ ಮಾಹಿತಿ ಪ್ರಕಾರ ಸತ್ಯ ಮತ್ತು ಸರಿಯಾಗಿರುತ್ತವೆ. ಪ್ರಮಾಣ ಪೂರ್ವಕ ಹೇಳಿಕೆ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**<u>ಪಾಟೀಸವಾಲುಃ ವಾದಿ ಪರ ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಲಾಯಿತು.</u>**

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ .

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ನ್ಯಾಯಾಲಯ ಬಾಗಲಕೋಟೆ